ಅಸಲು ದಾವಾ ನಂಃ 12/2025
ಪಿ ಡಬ್ಲ್ಯುಃ1

<u>ದಿನಾಂಕಃ **26-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ ಪ್ರತಿವಾದಿಯವರ ಪರ ಶ್ರೀ ಎಂ ಹೆಚ್ ಎಸ್ ಕೆ ವಕೀಲರಿಂದಃ</u>

ನನ್ನ ಮತ್ತು ಪ್ರತಿವಾದಿ 1 ಮತ್ತು 2 ರವರ ವಾಸದ ಮನೆಗಳು ಸಮೀಪದಲ್ಲಿ ಇರುತ್ತದೆ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರ ಮನೆ ಸರ್ಕಾರಿ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಸರ್ಕಾರಿ ಸರ್ವೆ ನಂಬರ್ ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮನೆಯನ್ನು ವಾದ ಪತ್ರದ ಶೆಡ್ಯೂಲ್ ನಲ್ಲಿ ಎಷ್ಟನೇ ಆಸ್ತಿ ಎಂದು ತೋರಿಸಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸೊತ್ತು 6 ಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಸೊತ್ತು 6 ಅನ್ನು ನಾನು ಊಹೆಯ ಮೇಲೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

2. ನಾನು, ನನ್ನ ತಾಯಿ ಹಾಗೂ ನನ್ನ ಸಹೋದರ ಚನ್ನಕೇಶವ ಎನ್ನುವವರಿಗೆ 2 ಎಕ್ರೆ ಜಮೀನನ್ನು ಮಾರಾಟ ಮಾಡಿರುತ್ತೇವೆ. ಸದರಿ ಜಮೀನಿನನ್ನು ನನ್ನ ಮದುವೆಯ ಪೂರ್ವದಲ್ಲಿ ಮಾರಾಟ ಮಾಡಲಾಗಿರುತ್ತದೆ. ಸದರಿ ಕ್ರಯದ ವ್ಯವಹಾರದಲ್ಲಿ ಬಂದ ಪ್ರತಿಫಲದ ಮೊತ್ತವನ್ನು ನಮ್ಮ ತಂದೆ ನನ್ನ ಹಿಸ್ಸೆ ಬಾಬ್ತು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು 2 ರವರ ಹೆಸರುಗಳು ಜಮೀನಿನ ಪಹಣಿಯಲ್ಲಿ ಜಂಟಿಯಾಗಿ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಜಮೀನು ಮಾರಾಟ ಮಾಡುವ ವಿಚಾರವನ್ನು ಆ ಜಮೀನಿನ ಅಕ್ಕಪಕ್ಕದವರು ಹೇಳಿದ್ದು ಅವರು ಜಮೀನು ಮಾರಾಟ ಮಾಡುವ ಬಗ್ಗೆ ಮಾಡಿಕೊಂಡ ಕರಾರು ಪತ್ರ ನನಗೆ ಸಿಕ್ಕಿರುತ್ತದೆ. ಸದರಿ ಕರಾರು ಪತ್ರದಲ್ಲಿ ಪ್ರತಿವಾದಿಗಳ ಸಹಿ ಇರುತ್ತದೆ. ಸದರಿ ಕರಾರು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಪ್ರತಿವಾದಿ 1 ಮತ್ತು 2 ರವರು ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಮಾಡಿರುತ್ತಾರೆ ಎಂಬ ಕಾರಣದಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

3. 2 ನೇ ಪ್ರತಿವಾದಿಯು ಅಲ್ಪ ವಯಸ್ಕರಿದ್ದು 1 ನೇ ಪ್ರತಿವಾದಿ ಮಾರಾಟ ಮಾಡುವ ಬಗ್ಗೆ ನ್ಯಾಯಾಲಯದಿಂದ ಅನುಮತಿಯನ್ನು ಪಡೆಯಲು ಅರ್ಜಿ ಸಲ್ಲಿಸಿರುವ ಬಗ್ಗೆ ನೀವು ನೋಡಿರುತ್ತೀರಾ ಎಂದರೆ ಸಾಕ್ಷಿ ಅವರು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಪ್ರತಿವಾದಿ 1 ಮತ್ತು 2 ರವರಿಗೆ ನಮ್ಮ ವಕೀಲರ

ಮುಖಾಂತರ ಜಮೀನು ಮಾರಾಟ ಮಾಡಿರುವ ಬಗ್ಗೆ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸ್ ಪ್ರತಿ ನಮ್ಮ ಬಳಿ ಇರುತ್ತದೆ. 3 ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಯಾವುದೇ ಆಸ್ತಿಯ ಸ್ವಾ ಧೀನದಲ್ಲಿ ಇರುವುದಿಲ್ಲ ಸಾಕ್ಷಿ ಮುಂದುವರೆದು ಅವರು ಖರೀದಿ ಮಾಡಿರುತ್ತಾರೆ ಆದರೆ ಪ್ರತಿವಾದಿ-1 ರವರೆ ನೋಡಿಕೊಳ್ಳುತ್ತಾರೆ ಎಂದು ಸಲ್ಲಿಸಿರುತ್ತಾರೆ. ನಮ್ಮ ಜಮೀನುಗಳ ಪಕ್ಕದ ಜಮೀನಿನ ಮಾಲೀಕರು ಚೆನ್ನಕೇಶವ ಎನ್ನುವವರು ಇರುತ್ತಾರೆ ಎಂದರೆ ಸರಿ. ಚೆನ್ನಕೇಶರವರ ಜಮೀನಿಗೆ ಲಗತ್ತಾಗಿರುವ ಜಮೀನು 30 ವರ್ಷಗಳಿಂದ 3 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸಾಕ್ಷಿ ಇತ್ತೀಚೆಗೆ ಇರುತ್ತಾರೆ ಎಂದು ಉತ್ತರಿಸಿರುತ್ತಾರೆ. 3 ನೇ ಪ್ರತಿವಾದಿ ಲಾಗಾಯ್ತು ಜಮೀನುಗಳ ಸ್ವಾ ಧೀನದಲ್ಲಿ ಇರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

4. 1 ನೇ ಪ್ರತಿವಾದಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಸ್ವಂತ ದುಡಿಮೆಯಿಂದಲೇ ದಾವಾ ಆಸ್ತಿ 4 ರಿಂದ 6 ಅನ್ನು ಸಂಪಾದನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ದಾವಾ ಆಸ್ತಿ 1 ರಿಂದ 3 ರಲ್ಲಿ ಭಾಗಶಃ ಸ್ವಾಧೀನದಲ್ಲಿ ಇರುವ ಕಾರಣ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿರುತ್ತೇನೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ